**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 181/2017**

**ಸಿ ಡಬ್ಲ್ಯೂ - 5**
**ಪಿ ಡಬ್ಲ್ಯೂ - 9**

| | |
|---|---|
| ಸಾಕ್ಷಿ ಹೆಸರು - | ಸಲೀಮ್ ಜಾವೀದ್ |
| ತಂದೆಯ ಹೆಸರು- | ಕೆ ಹಯಾದ್ ಸಾಬ |
| ವಯಸ್ಸು - | 35 ವರ್ಷಗಳು |
| ಉದ್ಯೋಗ - | ಮಟನ್ ವ್ಯಾಪಾರ |
| ವಾಸಸ್ಥಳ - | ಹೊಸಪೇಟೆ |

**ಸಾಕ್ಷಿಯನ್ನು ದಿನಾಂಕಃ 13-06-2023 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಆರೋಪಿ **5-6** ವರ್ಷಗಳ ಹಿಂದೆ ಪಾಸಪೋರ್ಟ ಸಲುವಾಗಿ ಅರ್ಜಿ ಸಲ್ಲಿಸಿದ್ದ ಆರೋಪಿ ನಮ್ಮ ಮನೆಯ ಪಕ್ಕದಲ್ಲಿ ಇದ್ದಾನೆ. ಆರೋಪಿ ಯೂನೂಸ್ ಎನ್ನುವವರ ಮಗ. ಆರೋಪಿ ಪಾಸಪೋರ್ಟ ಸಲುವಾಗಿ ಅರ್ಜಿ ಸಲ್ಲಿಸಿದ್ದ ಬಗ್ಗೆ ನನಗೆ ಗೊತ್ತಿರಲಿಲ್ಲ. ಪೋಲಿಸರು ಠಾಣೆಗೆ ಕರೆದಾಗ ನಾನು ಹೋಗಿ ಸಹಿ ಮಾಡಿರುತ್ತೇನೆ. ಮುಂದೆ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲುಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ಯೂನೂಸ್ ನಮ್ಮ ಮನೆಯ ಪಕ್ಕದಲ್ಲಿದ್ದು ಅವರಿಗೆ ಆರೋಪಿ ಮತ್ತು ಇನ್ನೊಬ್ಬ ಮಗನಿರುತ್ತಾರೆ. ಅವರ ಹೆಸರು ಎಜಾಜ್ ಅಹ್ಮದ್ ಮತ್ತು ಎಜಾಸ್ ಅಹ್ಮದ್ ಅಂದರೆ ಸರಿ. ಆರೋಪಿ ವಿದೇಶಕ್ಕ ಹೋಗಿ ಹಣ ಸಂಪಾದನೆ ಮಾಡಿಕೊಂಡು ಬರಲು ಪಾಸಪೋರ್ಟ

**ಸಿ ಡಬ್ಲ್ಯೂ - 5**
**ಪಿ ಡಬ್ಲ್ಯೂ - 9**

ಸಲುವಾಗಿ ಅರ್ಜಿ ಸಲ್ಲಿಸಿದ್ದ ಈ ಬಗ್ಗೆ ನನಗೆ ಸಾಕ್ಷಿ ಸಹಿ ಮಾಡಲು ಬರಬೇಕು ಅಂತಾ ಹೇಳಿದ್ದ ಅಂದರೆ ಸರಿಯಲ್ಲ. ದಿಃ 21-11-2014 ರಂದು ಪಾಸಪೋರ್ಟ ಪರಿಶೀಲನೆಗಾಗಿ ಬಂದಿದೆ ಪೋಟೋ ತೆಗೆದುಕೊಂಡು ಬಾ ಅಂತಾ ತಿಳಿಸಿದನು ಅಂದರೆ ಸರಿಯಲ್ಲ.

ಪಾಸಪೋರ್ಟ ಕಚೇರಿಯಿಂದ ಅವರ ಅಣ್ಣನ ಹೆಸರಿಗೆ ತಪ್ಪಾಗಿ ಬಂದಿದೆ ಅದನ್ನು ಸರಿಪಡಿಸಲು ಹೇಳಿದ್ದೇನೆ. ನಮಗೆ ಎಜಾಜ್ ಅಹ್ಮದ್ ಅಂತಾ ಹೇಳಿ ಅಂತಾ ನಮಗೆ ಹೇಳಿದನು ಅಂದರೆ ಸರಿಯಲ್ಲ. ನಂತರ ಠಾಣೆಗೆ ಹೋಗಿ ಆರೋಪಿ ನಮಗೆ ಪರಿಚಯ ಇದ್ದಾನೆ ಅಂತಾ ಹೇಳಿದೆನು ಅಂದರೆ ಸರಿಯಲ್ಲ. ನಂತರ ಆರೋಪಿ ತನ್ನ ಅಣ್ಣನ ಹೆಸರಿನ ಎಲ್ಲಾ ದಾಖಲಾತಿಗಳನ್ನು ನೀಡಿ ತನ್ನ ಪೋಟೋ ನೀಡಿ ಮೋಸ ಮಾಡಿದ್ದಾನೆಂದು ಪ್ರಕರಣ ಆದ ಬಗ್ಗೆ ನನಗೆ ತಿಳಿಯಿತು ಅಂದರೆ ಸರಿಯಲ್ಲ.

ಈ ಕುರಿತು ನಾನು ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಕಾರಣ ಸದರಿ ಹೇಳಿಕೆಯನ್ನು ನಿಪಿಃ 21 ಎಂದು ಗುರುತಿಸಲಾಯಿತು. ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಪಿ ವಾಯ್ ವಕೀಲರಿಂದಃ**

ನಾನು ಠಾಣೆಗೆ ಹೋಗಿಲ್ಲ ಅಂದರೆ ಸರಿ. ನನ್ನ ಹೇಳಿಕೆಯಲ್ಲಿ ಏನೆಲ್ಲಾ ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.